ಪಿ.ಡಬ್ಲೂ-**1**

ದಿನಾಂಕ:**17.01.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**<u>ಮುಂದುವರೆದ ಪಾಟೀಸವಾಲು ಪ್ರತಿವಾದಿ ಪರ ಶ್ರೀ ಎಸ್.ಎನ್.ಕೆ. ವಕೀಲರಿಂದ:</u>**

ದಾವಾ ಸ್ವತ್ತು ನಿಂಗೇಗೌಡ ರವರಿಂದ ರೂ. 8,000/- ಗಳಿಗೆ ಸಣ್ಣಮ್ಮ ರವರು ಕ್ರಯಕ್ಕೆ ಪಡೆದಂತಹ ಸ್ವತ್ತು ಎಂದರೆ ಸರಿಯಲ್ಲ. ನಿಪಿ-9 ರಲ್ಲಿ ಕಲಂ 10 ರಲ್ಲಿ ಕ್ರಯ ಎಂದು ನಮೂದು ಇರುತ್ತದೆಂದರೆ ಸರಿ. ಸಾಕ್ಷಿ ಮುಂದುವರೆದು ನಮ್ಮ ಮಾವ ಕುಡಿತದ ಚಟದಿಂದ ಮಾರಾಟ ಮಾಡಿದ್ದು, ಅದನ್ನು ಪುನಃ ಬಿಡಿಸಿಕೊಂಡು ಅತ್ತೆಯ ಹೆಸರಿಗೆ ಮಾಡಿಸಿರುತ್ತೇವೆ ನುಡಿಯುತ್ತಾರೆ.

ನಿಂಗೇಗೌಡ ಬಿನ್ ಬೋರೇಗೌಡ ರವರೊಂದಿಗೆ ನಿಮಗೆ ಯಾವುದೇ ರಕ್ತ ಸಂಬಂಧ ಇರುವುದಿಲ್ಲ ಎಂದರೆ ಸಾಕ್ಷಿ ನಮ್ಮ ಮಾವನ ಕಡೆಯ ಸಂಬಂಧ ಎಂದು ನುಡಿಯುತ್ತಾರೆ. ಸಣ್ಣಮ್ಮ ರವರು ವಿಜಿ ಕೋಂ ಪ್ರಕಾಶ ರವರಿಗೆ ದಾವಾ ಸ್ವತ್ತನ್ನು ದಾನದ ಮೂಲಕ ನೀಡಿರುತ್ತಾರೆಂದರೆ ಸರಿಯಲ್ಲ. ನಿಪಿ-10 ರಲ್ಲಿ ನಮೂದಾಗಿರುವ ಎಂ.ಆರ್.ಹೆಚ್.27/2014-15 ನ್ನು ಸಂಬಂಧಪಟ್ಟ ಇಲಾಖೆಯಲ್ಲಿ ಪ್ರಶ್ನಿಸಿದ್ದೀರಾ ಎಂದರೆ ಸಾಕ್ಷಿ ಪ್ರಶ್ನಿಸಿರುವುದಿಲ್ಲ, ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಖಾತಾ ಬದಲಾವಣೆಗೆ ಅರ್ಜಿ ಹಾಕಿದ ಸಮಯದಲ್ಲಿ ನಾನು ಯಾವುದೇ ತಕರಾರು ಎತ್ತಿರುವುದಿಲ್ಲ, ಮುಂದುವರೆದು ನನಗೆ ವಿಚಾರ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

ನನ್ನ ಅತ್ತೆ ಮರಣ ಹೊಂದಿ 7 ವರ್ಷ ಆಗಿರುತ್ತದೆ. ನನ್ನ ಮಾವ ಕಾಫಿ ವರ್ಕ್ಸ್ ನಲ್ಲಿ ಮೇಸ್ತ್ರಿಯಾಗಿ ಕೆಲಸ ಮಾಡುತ್ತಿದ್ದರು. ಸಣ್ಣಮ್ಮ ರವರು ಅದೇ ಕಾಫಿ ವರ್ಕ್ಸ್ ನಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ದಿ: 25.04.1973 ರಲ್ಲಿ ನಿಮ್ಮ ಮಾವನವರಿಗೆ ರೂ.70/- ಸಂಬಳ ನೀಡುತ್ತಿದ್ದರು ಎಂದರೆ ಸರಿ. ನಿಪಿ-1 ರ ಪ್ರಕಾರ ಸ್ವಯಾರ್ಜಿತ ಸ್ವತ್ತನ್ನು ವಿಜಿ ರವರಿಗೆ ದಾನವಾಗಿ ನೀಡುತ್ತಿದ್ದೇನೆಂದು ಬರೆಸಿರುತ್ತಾರೆಂದರೆ ಸುಳ್ಳು. ನಿಪಿ-1 ರ 5 ನೇ ಪುಟದಲ್ಲಿರುವ ಭಾವಚಿತ್ರ ಯಾರದು ಎಂದರೆ ಸಾಕ್ಷಿ ನನ್ನ ಅತ್ತೆಯ ಭಾವಚಿತ್ರ ಎಂದು ಉತ್ತರಿಸಿದ್ದು, ಅದನ್ನು **ನಿಪಿ-1(ಎ)** ಎಂದು ಗುರುತಿಸಲಾಯಿತು. ಸದರಿ ಭಾವಚಿತ್ರದ ಪಕ್ಕದಲ್ಲಿರುವ ಸಹಿ ನಿಮ್ಮ ಅತ್ತೆಯದು ಎಂದರೆ ಸುಳ್ಳು, ಮುಂದುವರೆದು ಅವರು ಹೆಬ್ಬಟ್ಟಿನ ಗುರುತು ಹಾಕುತ್ತಿದ್ದರು

ಎಂದು ನುಡಿಯುತ್ತಾರೆ. ದಾವಾ ಸ್ವತ್ತು ನನ್ನ ಅತ್ತೆ ಸಣ್ಣಮ್ಮರವರಿಗೆ ಬಂದಂತಹ ಸ್ವಯಾರ್ಜಿತ ಸ್ವತ್ತು ಎಂದು ನಾನು ಹಾಜರುಪಡಿಸಿದ ದಾಖಲೆಗಳಲ್ಲಿನಮೂದು ಆಗಿರುತ್ತದೆಂದರೆ ಸುಳ್ಳು. ದಾವಾ ಸ್ವತ್ತಿನಲ್ಲಿ ನಾನು ಸ್ವಾಧೀನ ಇದ್ದೇನೆಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ದಾವಾ ಸ್ವತ್ತು ಒಟ್ಟು ಕುಟುಂಬದ ಆಸ್ತಿ ಎಂಬುದು ಸುಳ್ಳು, ನಿಮ್ಮ ಅತ್ತೆಯ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ.

ನಮ್ಮ ಮಾವ ನಿವೃತ್ತಿ ಹೊಂದಿದ ಸಂದರ್ಭದಲ್ಲಿ ನಮ್ಮ ಮಾವನಿಗೆ ಪಿಂಚಣಿ ಹಣ ಬಂದಿರಲಿಲ್ಲ ಎಂದರೆ ಸರಿ. ದಾವಾ ಸ್ವತ್ತು ಪಿತ್ರಾರ್ಜಿತ ಆಸ್ತಿ ಅಲ್ಲ ಎಂದರೆ ಸರಿಯಲ್ಲ. ನಿಪಿ-1 ಊರ್ಜಿತವಾಗಿರುತ್ತದೆ, ನಾನು ಅನ್ಯತಾ ಫಾಯಿದೆ ಪಡೆಯುವ ಉದ್ದೇಶದಿಂದ ಸುಳ್ಳು ದಾವೆ ಹೂಡಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಿಪಿ-1 ಮೋಸದಿಂದ ಬರೆಸಿಕೊಂಡಿರುತ್ತಾರೆಂದು ಪೊಲೀಸ್ ಠಾಣೆಗೆ ದೂರು ನೀಡಿರುವುದಿಲ್ಲ. ದಾವಾ ಸ್ವತ್ತು ನಮ್ಮ ಅತ್ತೆಯ ಸ್ವಯಾರ್ಜಿತ ಸ್ವತ್ತಾದ್ದರಿಂದ ನಾನು ಕೋರಿದ ಪರಿಹಾರ ಪಡೆಯಲು ಅರ್ಹಳಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.